ಮಧುಗಿರಿಯ ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯದಲ್ಲಿ

**ಸಿಸಿ. ಸಂಖ್ಯೆ: 9/2022**

ಪ್ರ.ವ.ಬೋ.ತಾಃ 26-06-2025

ಚಾಸಾಃ 4

| | |
|---|---|
| ಸಾಕ್ಷಿಯ ಹೆಸರು | ರೇವಣ್ಣ |
| ತಂದೆ/ಗಂಡನ ಹೆಸರು | ಗಂಗಾಧರಯ್ಯ |
| ವಯಸ್ಸು | 60 ವರ್ಷ |
| ವೃತ್ತಿ | ಪಿ.ಎಸ್.ಐ. ದೊಡ್ಡಬಳ್ಳಾಪುರ ಗ್ರಾಮಾಂತರ ಪೊ. ಠಾಣೆ |
| ವಾಸ | ದೊಡ್ಡಬಳ್ಳಾಪುರ |

**ಮುಖ್ಯ ವಿಚಾರಣೆಃ- ಶ್ರೀ.ಪಿ.ಸಿ.ಎನ್. ವಕೀಲರಿಂದಃ-**

ನಾನು ದಿನಾಂಕಃ 17-07-2017 ರಿಂದ 06-06-2021 ರವರೆಗೆ ಮಧುಗಿರಿ ಪೊಲೀಸ್ ಠಾಣೆಯಲ್ಲಿ ಎ.ಎಸ್.ಐ. ಆಗಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿನಾಂಕಃ 11-08-2020 ರಂದು ದೂರುದಾರರಾದ ಸಣ್ಣಲಿಂಗಪ್ಪರವರು ನಮ್ಮ ಮೇಲಾಧಿಕಾರಿಗಳಾದ ಡಿ.ಎಸ್.ಪಿ. ರವರಿಗೆ ದೂರು ನೀಡಿದ್ದು, ಬಿ.ಸಿ.ಪಾಳ್ಯ ಗ್ರಾಮದ ನಿವೇಶನದ ಖಾತಾ ಸಂಖ್ಯೆ 122/3 ರಲ್ಲಿ ಅದೇ ಗ್ರಾಮದ ರಂಗಮ್ಮ ಮನೆ ಕಟ್ಟದಂತೆ ತಡೆಯುವಂತೆ ದೂರು ಸಲ್ಲಿಸಿದ್ದು, ಅದರಂತೆ ರಂಗಮ್ಮನವರ ಹೇಳಿಕೆ ಪಡೆದು, ನಂತರ ದೂರಿನಲ್ಲಿ ಹೇಳಲಾದ ವಿಚಾರಗಳು ಸಿವಿಲ್ ನ್ಯಾಯಾಲಯದ ವ್ಯಾಪ್ತಿಗೆ ಬರುವುದರಿಂದ

ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿ ಬಗೆಹರಿಸಿಕೊಳ್ಳುವಂತೆ ತಿಳಿಸಿ ಹಿಂಬರಹವನ್ನು ನೀಡಿರುತ್ತೇನೆ. ಹಿಂಬರಹವನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿಸಿ.22 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಸಿ.22(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ– 9 ರಿಂದ 12 ನೇ ಆರೋಪಿತರ ಪರವಾಗಿಃ ಶ್ರೀ.ಪಿ.ಸಿ.ಕೆ.ಆರ್. ವಕೀಲರಿಂದಃ–**

ಆ ದೂರಿನಲ್ಲಿ ಗಲಾಟೆಯಾಗಿ ಹಲ್ಲೆ ಮಾಡಿದ ಬಗ್ಗೆ ಮತ್ತು ಅವ್ಯಾಚ ಶಬ್ದಗಳಿಂದ ಬೈದ್ದು ಬಗ್ಗೆ ಯಾವುದೇ ಅಂಶಗಳನ್ನು ನಮೂದಿಸಿರಲಿಲ್ಲ. ಆ ಸಮಯದಲ್ಲಿ ನ್ಯಾಯಾಲಯದಿಂದ ತಡೆ ಆಜ್ಞೆ ನೀಡಿದ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ.

1 ರಿಂದ 8 ನೇ ಆರೋಪಿತರ ಪರ ಯಾರು ಪ್ರತಿನಿಧಿಸದೆ ಇರುವುದರಿಂದ ಪಾಟೀ ಸವಾಲು ಇಲ್ಲಾ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆಃ– ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ಗಣಕೀಕೃತಗೊಳಿಸಲಾಯಿತು)

ಓ.ಹೇ.ಸಾ.ಸ.ಇ.ಒ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆಎಂಎಫ್‌ಸಿ, ಮಧುಗಿರಿ